ಕೈಗೊಳ್ಳಲಾಗುತ್ತಿದೆ. ಜಿಲ್ಲಾ ಮುಖ್ಯ ರಸ್ತೆಗಳನ್ನು ಅನುದಾನದ ಲಭ್ಯತೆಯ ಮೇರೆಗೆ ದುರಸ್ಥಿಗೊಳಿಸಿ ಅಭಿವೃದ್ಧಿಪಡಿಸಲಾಗುವುದು.

ಇ) 2005–06ನೇ ಸಾಲಿಗೆ ನಿಗದಿಪಡಿಸಿದ ಹಣದ ವಿವರ ಕೆಳಕಂಡಂತಿದೆ.

ರಸ್ತೆಯ ವರ್ಗ	ನಿಗದಿಪಡಿಸಿದ ಹಣ
ರಾಜ್ಯ ಹೆದ್ದಾರಿಗೆ	ರೂ. 212.00 ಲಕ್ಷ
ಜಿಲ್ಲಾ ಮುಖ್ಯ ರಸ್ತೆಗಳಿಗೆ	ರೂ. 66.50 ಲಕ್ಷ
ಒಟ್ಟು	ರೂ. 278.50 ಲಕ್ಷ

ಈ) 66.0 ಕಿ.ಮೀ.ಗಳ ರಾಜ್ಯ ಹೆದ್ದಾರಿಯಲ್ಲಿ 8.0 ಕಿ.ಮೀ. ಉದ್ದವನ್ನು ಅಭಿವೃದ್ಧಿಗೊಳಿಸಿದೆ. ಉಳಿದ 58.0 ಕಿಮೀ. ಉದ್ದವನ್ನು ಶೀಘ್ರ ದುರಸ್ಥಿಗೊಳಿಸಲು ಕ್ರಮ ಕೈಗೊಳ್ಳಲಾಗುವುದು. 148.00 ಕಿ.ಮೀ. ಉದ್ದದ ಜಿಲ್ಲಾ ಮುಖ್ಯ ರಸ್ತೆಗಳಲ್ಲಿ 77.0 ಕಿ.ಮೀ. ಉದ್ದವನ್ನು ದುರಸ್ತಿಗೊಳಿಸಿದ್ದು, ಉಳಿದ 71.0 ಕಿ.ಮೀ. ಉದ್ದವನ್ನು ಅನುದಾನ ಲಭ್ಯತೆಯಂತೆ ದುರಸ್ಥಿಗೊಳಿಸಲಾಗುವುದು.

739(955) ಶ್ರೀ ನರಸಿಂಹಸ್ವಾಮಿ ಜೆ. (ದೊಡ್ಡಬಳ್ಳಾಪುರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗ್ರಾಮಾಂತರ ಪ್ರದೇಶದ ಗ್ರಾಮೀಣ ಸಾರಿಗೆಗಳಲ್ಲಿ ಪ್ರಯಾಣಿಕರು ಒಂದು ವಾಹನದಲ್ಲಿ 100 ರಿಂದ 120ಕ್ಕೆ ಮೀರಿ ಪ್ರಯಾಣಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಹಾಗಿದ್ದಲ್ಲಿ, ಇಂತಹ ಮಾರ್ಗಗಳನ್ನು ಸಮೀಕ್ಷೆ ನಡೆಸಿ ಹೆಚ್ಚಿನ ವಾಹನಗಳನ್ನು ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಎನ್. ಚಲುವರಾಯಸ್ವಾಮಿ (ಸಾರಿಗೆ ಸಚಿವರು) :

ಅ) ಇಲ್ಲ.

ಆ) ಪ್ರಯಾಣಿಕರ ಹೆಚ್ಚಿನ ಒತ್ತಡ ಕಂಡು ಬಂದ ಮಾರ್ಗಗಳಲ್ಲಿ ಮಾರ್ಗಗಳನ್ನು ಸಮೀಕ್ಷೆ ನಡೆಸಿ ಅಂತಹ ಮಾರ್ಗಗಳಲ್ಲಿ ಹೆಚ್ಚಿನ ಗ್ರಾಮೀಣ ಅನುಸೂಚಿ/ಸರದಿಗಳನ್ನು ಪೂರೈಸಲಾಗುತ್ತಿದೆ.

741(1157) ಶ್ರೀ ನರೇಂದ್ರಬಾಬು ನೆ.ಲ. (ರಾಜಾಜಿನಗರ) : ಮಾನ್ಯ ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ವಿಧಾನಸೌಧದ ಒಳ ಮತ್ತು ಹೊರ ಆವರಣಕ್ಕೆ ಒದಗಿಸಿರುವ ಭದ್ರತಾ ಸಿಬ್ಬಂದಿಗಳ ಸಂಖ್ಯೆ ಎಷ್ಟು (ವರ್ಗಾವಾರು ವಿವರ ಒದಗಿಸುವುದು):

ಆ) ಈ ಭದ್ರತಾ ವ್ಯವಸ್ಥೆಯ ನಿರ್ವಹಣೆಯನ್ನು ಯಾವ ಯಾವ ಘಟಕಗಳು ಮಾಡುತ್ತಿವೆ.

ಇ) ವಾಚ್ ಅಂಡ್ ವಾರ್ಡ್ ಸಿಬ್ಬಂದಿಗಳನ್ನು ಯಾವ ಪ್ರಕ್ರಿಯೆಯಲ್ಲಿ ನೇಮಿಸಿಕೊಳ್ಳಲಾಗುವುದು;

ಈ) ಈ ಸಿಬ್ಬಂದಿಯವರ ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳು ಏನು:

ಉ) 2005–06ನೇ ಸಾಲಿನಲ್ಲಿ ಕರ್ತವ್ಯ ಲೋಪದ ಮೇಲೆ ಎಷ್ಟು ಸಿಬ್ಬಂದಿಯವರಿಗೆ ಇಲಾಖಾ ವಿಚಾರಣೆ ಮತ್ತು ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳಲಾಗಿದೆ (ವಿವರ ಒದಗಿಸುವುದು)?

ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :

ಅ) ವಿಧಾನಸೌಧದ ಒಳ ಮತ್ತು ಹೊರ ಆವರಣದ ಭದ್ರತಾ ಕಾರ್ಯವನ್ನು ನಿರ್ವಹಿಸಲು ಈ ಕೆಳಕಂಡ ಅಧಿಕಾರಿ/ಸಿಬ್ಬಂದಿಯವರುಗಳನ್ನು ನೇಮಿಸಲಾಗಿದೆ.

ಸಿವಿಲ್ ಸಿಬ್ಬಂದಿ:

	ಎಸಿಪಿ	ಪಿಐ	ಪಿ.ಎಸ್.ಐ.	ಎ.ಎಸ್.ಐ	ಹೆಚ್.ಸಿ	ಪಿಸಿ
ವಿಧಾನಸೌಧ	1	2	9	4	17	66
ವಿಕಾಸ ಸೌಧ	–	–	3	–	3	12
ಒಟ್ಟು	1	2	12	4	20	78

ಸಿ.ಎ.ಆರ್. ಸಿಬ್ಬಂದಿ:

	ಆರ್.ಎಸ್.ಐ.	ಎ.ಹೆಚ್.ಸಿ.	ಎಪಿಸಿ
ವಿಧಾನಸೌಧ	–	–	36
ವಿಧಾನಸೌಧ ಕಾಯ್ದಿರಿಸಲಾದ ಸಿ.ಎ.ಆರ್.ಪಡೆ	1	2	12
ವಿಕಾಸಸೌಧ	–	3	3
ಒಟ್ಟು	1	5	51

ಆ) ವಿಧಾನಸೌಧದ ಭದ್ರತಾ ವ್ಯವಸ್ಥೆಯನ್ನು ನಗರದ ಸಿವಿಲ್ ಸಿಬ್ಬಂದಿ, ಸಿ.ಎ.ಆರ್. ಕೇಂದ್ರಸ್ಥಾನ, ಕೆ.ಎಸ್.ಆರ್.ಪಿ. ಮತ್ತು ರಾಜ್ಯ ಗುಪ್ತವಾರ್ತೆರವರ ಸಹಯೋಗದೊಂದಿಗೆ ವಿಧಾನಸೌಧ ಭದ್ರತಾ ಪಡೆ ನಿರ್ವಹಿಸುತ್ತಿದೆ.

ಇ) ವಾಚ್ ಅಂಡ್ ವಾರ್ಡ್ ವಿಭಾಗದಲ್ಲಿ ಕಾವಲುಗಾರರು ಸಚಿವಾಲಯದ ಗ್ರೂಪ್–ಡಿ ದರ್ಜೆಯ ನೌಕರರಾಗಿರುತ್ತಾರೆ. ಈ ನೌಕರರನ್ನು ಸಚಿವಾಲಯದ ವೃಂದ ಮತ್ತು

ನೇಮಕಾತಿ ನಿಯಮಗಳನ್ವಯ ನೇಮಕಾತಿ ಮಾಡಿಕೊಳ್ಳಲಾಗುತ್ತದೆ. ಅವರ ಮೇಲ್ವಿಚಾರಣೆಗೆ ಪೊಲೀಸ್ ಇಲಾಖೆಯಿಂದ ಹೆಡ್ ಕಾನ್ಸ್‌ಟೇಬಲ್ ದರ್ಜೆಯ ಕರ್ತವ್ಯಾಧಿಕಾರಿಗಳನ್ನು ನಿಯೋಜನೆ ಮೇಲೆ ನೇಮಿಸಲಾಗುತ್ತಿದೆ. ಈ ವಿಭಾಗಕ್ಕೆ ಮುಖ್ಯಸ್ಥರಾಗಿ ಪೊಲೀಸ್ ಇಲಾಖೆಯಿಂದ ಸಬ್ ಇನ್ಸ್‌ಪೆಕ್ಟರ್ ದರ್ಜೆಯ ಅಧಿಕಾರಿಗಳನ್ನು ಭದ್ರತಾಧಿಕಾರಿಯಾಗಿ ಸಹಾಯಕ ಸಬ್ ಇನ್ಸ್‌ಪೆಕ್ಟರ್ ಆಫ್ ಪೊಲೀಸ್ ದರ್ಜೆಯ ಅಧಿಕಾರಿಯನ್ನು ನಿಯೋಜನೆ ಮೇಲೆ ನೇಮಿಸಿಕೊಳ್ಳಲಾಗುತ್ತಿದೆ.

ಈ) ಸಚಿವಾಲಯದ ಕಚೇರಿಗಳು ಮತ್ತು ಅದರ ಒಳಗಡೆಯಿರುವ ಪೀಠೋಪಕರಣಗಳು ವಸ್ತುಗಳ ಭದ್ರತಾ ವಿಪ್ಪಾಡನ್ನು ಮಾಡುವುದು ವಾಚ್ ಅಂಡ್ ವಾರ್ಡ್ ವಿಭಾಗದ ಭದ್ರತಾಧಿಕಾರಿಯವರ ಜವಾಬ್ದಾರಿಯಾಗಿರುತ್ತದೆ. ವಿಧಾನಸೌಧ ಕಟ್ಟಡದ ಮೇಲೆ ಇರುವ ರಾಷ್ಟ್ರಧ್ವಜವನ್ನು ನಿಯಮಾನುಸಾರ ಬೆಳಿಗ್ಗೆ ನಿಗಧಿತ ವೇಳೆ ಏರಿಸುವುದು ಮತ್ತು ಸಂಜೆ ನಿಗಧಿತ ವೇಳೆ ಇಳಿಸುವುದು ಹಾಗೂ ಸಚಿವಾಲಯದೊಳಗೆ ಯಾವುದೇ ಅನಧಿಕೃತ ವ್ಯಕ್ತಿಗಳು ಪ್ರವೇಶ ಪಡೆಯದಂತೆ ನೋಡಿಕೊಳ್ಳುವುದು. ಸಚಿವಾಲಯದ ಕಚೇರಿಗಳ ಕೊಠಡಿಗಳನ್ನು ಬೆಳಿಗ್ಗೆ ತೆರೆಯುವುದು ಮತ್ತು ಸಂಜೆ ಎಲ್ಲಾ ಅಧಿಕಾರಿ ಸಿಬ್ಬಂದಿ ತೆರಳಿದ ನಂತರ ಆ ಕೊಠಡಿಗಳಲ್ಲಿರುವ ವಿದ್ಯುತ್ ದೀಪ್, ಫ್ಯಾನ್‌ಗಳನ್ನು ಆರಿಸಿ, ನೀರಿನ ನಲ್ಲಿಗಳನ್ನು ನಿಲ್ಲಿಸಿ ಕೊಠಡಿಗಳಿಗೆ ಬೀಗ ಹಾಕುವುದು.

ಉ) ದಿನಾಂಕ: 29–9–2005ರಂದು ರಾಜ್ಯ ಸರ್ಕಾರಿ ನೌಕರರ ಮುಷ್ಕರ ಸಮಯದಲ್ಲಿ ಕರ್ತವ್ಯ ಲೋಪವೆಸಗಿದ 4 ಮಂದಿ ಪೋಲೀಸ್ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ಜರುಗಿಸಲಾಗಿದೆ ಮತ್ತು ದಿನಾಂಕ: 9–3–2006 ರಂದು ರಾಜ್ಯ ಸರ್ಕಾರಿ ನೌಕರರ ಮುಷ್ಕರ ಸಮಯದಲ್ಲಿ ಕರ್ತವ್ಯ ಲೋಪವೆಸಗಿದ 1 ಪೋಲೀಸ್ ಅಧಿಕಾರಿ ಹಾಗೂ 1 ಪೊಲೀಸ್ ಸಿಬ್ಬಂದಿಯವರ ಮೇಲೆ ಕರ್ತವ್ಯಲೋಪ ಆರೋಪದ ಮೇಲೆ ಶಿಸ್ತಿನ ಕ್ರಮ ಜರುಗಿಸಲಾಗಿದೆ.

742(1287) ಶ್ರೀ ನರೇಂದ್ರಬಾಬು ನೆ.ಲ. (ರಾಜಾಜಿನಗರ) : ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜಾಜಿನಗರದ 6ನೇ ಬ್ಲಾಕ್‌ನ ವಸತಿಗೃಹಗಳಲ್ಲಿ ಸರ್ಕಾರಿ ಸೇವೆಯಿಂದ ನಿವೃತ್ತಿಯಾಗಿ ಹಲವಾರು ವರ್ಷಗಳಿಂದ ವಸತಿಗೃಹಗಳಲ್ಲಿ ವಾಸಿಸುತ್ತಿರುವ ನೌಕರರೆಷ್ಟು; ವಾಸಿಸುತ್ತಿದ್ದಲ್ಲಿ ಅವರನ್ನು ಖಾಲಿ ಮಾಡಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ;

ಆ) ಸ್ವಂತ ಮನೆಗಳಿದ್ದು, ಆ ಮನೆಗಳನ್ನು ಬಾಡಿಗೆ ಕೊಟ್ಟು ಸರ್ಕಾರಿ ವಸತಿಗೃಹಗಳಲ್ಲಿ ವಾಸಿಸುತ್ತಿರುವವರ ವಿರುದ್ಧ ಸರ್ಕಾರ ಕ್ರಮ ಕೈಗೊಂಡಿದೆಯೇ;